

ಹಾಸ್ಯನಟನಿಗೆ ತುಂಬ ಮುಖ್ಯ. ಹಾಗೆಯೇ ಸರಿಯಾದ ಸಮಯಕ್ಕೆ ರಿಯಾಕ್ಷನ್ ಕೊಡುವ ಕಲೆಯೂ ಬೇಕು. ಒಂದು ರಿಯಾಕ್ಷನ್ ನೂರು ಶಬ್ದಗಳ ಡೈಲಾಗ್ ಅನ್ನು ನುಂಗಿಬಿಡುವಷ್ಟು ಶಕ್ತವಾಗಿರುತ್ತದೆ. ಅಂಥದೊಂದು ರಿಯಾಕ್ಷನ್ ಇಡೀ ಸೀನ್ ಅನ್ನೇ ಎತ್ತಿನಿಲ್ಲಿಸುತ್ತದೆ. ನಮ್ಮಲ್ಲಿ ಕಾಶಿನಾಥ್, ಜಗ್ಗೇಶ್ ಥರದ ನಟರು ಇದನ್ನು ತುಂಬ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದರು. ಹಾಗಾಗಿ ಅವರನ್ನು ನೋಡಿದರೆ ಸಾಕು, ಈಗಲೂ ನಮಗೆ ನಗು ಉಕ್ಕುತ್ತದೆ' ಎಂದು ಹಾಸ್ಯರಸದ ಹಿಂದಿನ ಸೂತ್ರಗಳ ಕುರಿತು ಅವರು ಮಾತಾಡುತ್ತಾರೆ.

ನಟ ತನ್ನ ಪಾತ್ರದ ಚೌಕಟ್ಟಿನ ಆಚೆ ಹೋಗಿ ಹಾಸ್ಯ ಮಾಡಹೊರಡುವುದು ಔಚಿತ್ಯವಲ್ಲ ಎಂಬುದೂ ಅವರಿಗೆ ಗೊತ್ತಿದೆ. 'ಎಲ್ಲ ಹಾಸ್ಯನಟರಿಗೂ ಅವರದೇ ಆದ ಶಕ್ತಿ ಇರುತ್ತದೆ, ಶೈಲಿ ಇರುತ್ತದೆ. ಆ ಶೈಲಿಯನ್ನು ಸಿನಿಮಾದ ಪಾತ್ರದೊಳಗೆ ಬ್ಲೆಂಡ್ ಮಾಡಬೇಕು. ಆಗ ಕಥೆಗೆ ಪೂರಕವಾಗಿಯೂ, ನಮ್ಮ ಪ್ರತಿಭೆಗೆ ಪೂರಕವಾಗಿಯೂ ಹಾಸ್ಯ ಹುಟ್ಟಿಸಲು ಸಾಧ್ಯ. ಪಾತ್ರವನ್ನು ಬಿಟ್ಟು ನಮ್ಮ ಶೈಲಿಯನ್ನಷ್ಟೇ ಮಾಡಿಕೊಂಡು ಹೋದರೆ ಅದು ಏಕತಾನವಾಗುತ್ತದಷ್ಟೆ. ಅದು ಒಟ್ಟಾರೆ ಸಿನಿಮಾಗೂ ಪೂರಕವಾಗುವುದಿಲ್ಲ' ಎನ್ನುವುದು ಧರ್ಮಣ್ಣನ ನಿಲುವು.

ಐದು ವರ್ಷಗಳ ನಂತರ ಮತ್ತೆ ಸತ್ಯಪ್ರಕಾಶ್ ನಿರ್ದೇಶನದ ಸಿನಿಮಾವೊಂದರಲ್ಲಿ ನಟಿಸುವ ಅವಕಾಶ ಸಿಕ್ಕ ಥ್ರಿಲ್‌ನಲ್ಲಿ ಧರ್ಮಣ್ಣ ಇದ್ದಾರೆ. ''ರಾಮಾ ರಾಮಾ ರೇ' ಸಿನಿಮಾದಲ್ಲಿ ನಾನು, ನಟರಾಜ್ ಮತ್ತು ಸತ್ಯಪ್ರಕಾಶ್ ಅವರ ಕಾಂಬಿನೇಷನ್ ಚೆನ್ನಾಗಿ ವರ್ಕ್ ಆಗಿತ್ತು. ನಂತರ ಈ ಕಾಂಬಿನೇಷನ್‌ನಲ್ಲಿ ಮತ್ತ್ಯಾವಾಗ ಸಿನಿಮಾ ಬರಬಹುದು ಎಂದು ಜನ ಕಾಯುತ್ತಿದ್ದರು. ಅದಕ್ಕೊಂದು ಒಳ್ಳೆಯ ಕಥೆ ಬೇಕಿತ್ತಲ್ಲ, ಅದು ಈಗ ಸಿಕ್ಕಿದೆ. 'ಮ್ಯಾನ್ ಆಫ್ ದಿ ಮ್ಯಾಚ್' ಸಿನಿಮಾದಲ್ಲಿ ನನಗೆ ರಾಮಾ ರಾಮಾ ರೇ ಸಿನಿಮಾಗಿಂತಲೂ ಹೆಚ್ಚು ಅವಕಾಶವಿದೆ. ನಾನು ಕಳೆದ ಐದು ವರ್ಷಗಳ ಅನುಭವವನ್ನು ಇದರಲ್ಲಿ ಹಾಕಿ ನಟಿಸಿದ್ದೇನೆ. ಹಾಗೆಯೇ ಸತ್ಯಪ್ರಕಾಶ್ ಕೂಡ ಅಷ್ಟೇ ಶ್ರಮ ಹಾಕಿದ್ದಾರೆ. ನಟರಾಜ್, ನಾನು ಮತ್ತು ಸತ್ಯ ಅವರ ಕಾಂಬಿನೇಷನ್ ಈ ಸಲವೂ ಹಿಟ್ ಆಗುವುದರಲ್ಲಿ ಸಂದೇಹವಿಲ್ಲ' ಎಂದು ವಿಶ್ವಾಸದಿಂದ ಹೇಳಿದರು.

ಮತ್ತೆ ಆರಂಭದಲ್ಲಿ ಹೇಳಿದ ವಿಷಯಕ್ಕೇ ಅವರನ್ನು ಎಳೆದು ತಂದು, 'ನಿರ್ಮಾಪಕರಾಗುತ್ತಿದ್ದೀರಂತಲ್ಲಾ...' ಎಂದರೆ ಧರ್ಮಣ್ಣನ ಮೀಸೆ ಮತ್ತೆ ಕುಣಿಯಲು ಶುರುವಾಯಿತು. 'ನಿರ್ಮಾಪಕ ಆಗಿದ್ದು ಹೌದು. ಇದು ಹಣ ಹೂಡಿ ನಿರ್ಮಾಪಕ ಆಗಿದ್ದಲ್ಲ, ಹಣ ಪಡೆದು ನಿರ್ಮಾಪಕ ಆಗಿದ್ದು' ಎಂದು ಇನ್ನಷ್ಟು ಒಗಟಾಗಿ ಹೇಳಿ ಜೋರಾಗಿ ನಗಲು ಶುರುಮಾಡಿದರು. 'ಇದೇನು ಹೀಗೆ?' ಎಂದು ಕೇಳಿದರೆ 'ಈಗ್ಲೇ ಹೇಳಿದ್ರೆ ಕ್ಯೂರಿಯಾಸಿಟಿ ಇರೋದಿಲ್ಲ. ತಡ್ಕಳಿ ತಡ್ಕಳಿ... ಮ್ಯಾನ್ ಆಫ್ ದಿ ಮ್ಯಾಚ್ ಸಿನಿಮಾ ಬರುವವರೆಗೂ ತಡ್ಕಳಿ' ಮುಸಿಮುಸಿ ನಗುತ್ತಲೇ ಮುಖ ತಿರುಗಿಸಿಕೊಂಡು ಸೆಟ್ ಕಡೆಗೆ ಹೊರಟರು. ■

# ಚಂದನವನದಲ್ಲಿ ಸೂತಕ!

ಎರಡನೇ ಅಲೆಯ ಹೊಡೆತಕ್ಕೆ ತತ್ತರಿಸಿರುವ ಚಂದನವನದಲ್ಲಿ ಸೂತಕದ ವಾತಾವರಣವೇ ಮಡುಗಟ್ಟಿದೆ. ಅದರ ಜೊತೆಗೇ ಚಿತ್ರರಂಗಕ್ಕೆ ಸಂಬಂಧಿಸಿದವರ ಸರಣಿ ಸಾವುಗಳೂ ಕಂಗೆಡುವಂತೆ ಮಾಡಿವೆ.

ಹಿಂದಿನ ವರ್ಷ ಕೊರೊನಾ ಬಂದಾಗ ಚಿತ್ರರಂಗ, ಚಿರು ಸರ್ಜಾ, ಎಸ್.ಪಿ. ಬಾಲಸುಬ್ರಹ್ಮಣ್ಯಂ ಸೇರಿದಂತೆ ಹಲವರನ್ನು ಕಳೆದುಕೊಂಡು ದುಃಖಿಸಿತ್ತು. ಈ ವರ್ಷವೂ ಸಾವಿನ ವಾಸನೆ ನಿಧಾನಕ್ಕೆ ಆವರಿಸುತ್ತಿದೆ.

ಏ. 17ರಂದು 'ಏಜ್‌ತ್ರಿ' ಎಂಬ ಸಿನಿಮಾ ಮಾಸಪತ್ರಿಕೆಯ ಸಂಪಾದಕ, ಯುವ ಪತ್ರಕರ್ತ ಕರುಣೇಶ ಅವರ ಸಾವಿನ ಸುದ್ದಿ ಬಂದೆರಗಿತ್ತು. ಕೋವಿಡ್ 19 ಬಂದು ಆಸ್ಪತ್ರೆಗೆ ದಾಖಲಾಗಿದ್ದ ಕರುಣೇಶ್, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದರು. ಈ ಸಾವಿನ ಸುದ್ದಿ ಅರಗಿಸಿಕೊಳ್ಳುವುದಕ್ಕೂ ಮುನ್ನವೇ, ಅರ್ಜುನ್ ಮಂಜುನಾಥ್ ತೀರಿಕೊಂಡಿದ್ದಾರೆ ಎಂಬ ಸುದ್ದಿ ಬಂತು. 'ಕೆಮಿಸ್ಟ್ರಿ ಆಫ್ ಕರಿಯಪ್ಪ'. 'ಸಂಯುಕ್ತ 2' ಸಿನಿಮಾ ನಿರ್ಮಿಸಿ ನಟಿಸಿದ್ದ ಮಂಜುನಾಥ್ ಅವರ '0% ಲವ್' ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ಈ ಸಿನಿಮಾ ತೆರೆಗೆ ಬರುವ ಮೊದಲೇ ಅವರು ಇಹಲೋಕ ತ್ಯಜಿಸಿಹೋಗಿದ್ದಾರೆ.

ಮರಾಠಿ ನಿರ್ದೇಶಕಿ ಸುಮಿತ್ರಾ ಭಾವೆ ತೀರಿಕೊಂಡ ಸುದ್ದಿ ಕೇಳಿ ಅರಗಿಸಿಕೊಳ್ಳುವ ಮೊದಲೇ ಕನ್ನಡ ಚಿತ್ರರಂಗದ ಹಿರಿಯ ಡಿಸೈನರ್ ಮಸ್ತಾನ್ ಅವರ ಸಾವಿನ ಸುದ್ದಿ ಬಂತು. 2000ಕ್ಕೂ ಅಧಿಕ ಸಿನಿಮಾಗಳಿಗೆ ಡಿಸೈನರ್ ಆಗಿ ಕೆಲಸ ಮಾಡಿದ್ದ ಮಸ್ತಾನ್, 'ಕಲ್ಲೇಶಿ ಮಲ್ಲೇಶಿ', 'ಸಿತಾರ', 'ಶುಕ್ಲಾಂಭರದರಂ' ಎಂಬ ಮೂರು ಸಿನಿಮಾಗಳನ್ನು ನಿರ್ಮಿಸಿದ್ದರು. ಕಳೆದ 46 ವರ್ಷಗಳಿಂದ ಚಿತ್ರರಂಗದಲ್ಲಿ ಕೆಲಸ ಮಾಡಿದ್ದ ಮಸ್ತಾನ್, ತಮ್ಮ 63ನೇ ವರ್ಷದಲ್ಲಿ ಕೊರೊನಾಗೆ ಬಲಿಯಾದರು. ಅದೇ ದಿನ ಕನ್ನಡ ಚಿತ್ರರಂಗದ ವಾಹನ ಚಾಲಕರ ಸಂಘದ ಅಧ್ಯಕ್ಷ ಬಿ.ಎಂ. ಕೃಷ್ಣಮೂರ್ತಿ ಅವರೂ ಹೃದಯಾಘಾತದಿಂದ ನಿಧನರಾಗಿದ್ದಾರೆ. 69 ವರ್ಷದ ಅವರು ಕಳೆದ 40 ವರ್ಷಗಳಿಂದ ಚಿತ್ರರಂಗದಲ್ಲಿ ವಾಹನ ಚಾಲಕರಾಗಿ ಕೆಲಸ ಮಾಡುತ್ತಿದ್ದರು.

ಒಂದೆಡೆ ಚಿತ್ರರಂಗವೇ ಕುಸಿಯುವ ಭೀತಿ, ಇನ್ನೊಂದೆಡೆ ಚಿತ್ರರಂಗದ ಜನರು ಸಾಯುತ್ತಿರುವ ಆತಂಕ. ಕೊರೊನಾ ಸ್ಪರ್ಶಕ್ಕೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆಯಂತೂ ದೊಡ್ಡದಾಗುತ್ತಲೇ ಇದೆ.

ಈ ಸಾವಿನ ಸರಣಿ ಇಲ್ಲಿಗೇ ಕೊನೆಗೊಳ್ಳಲಿ, ಬೇಗ ಎಲ್ಲವೂ ಮೊದಲಿನಂತಾಗಲಿ ಎಂದು ಪ್ರಾರ್ಥಿಸುವುದನ್ನು ಬಿಟ್ಟರೆ ಬೇರೆ ದಾರಿ ಕಾಣಿಸುತ್ತಿಲ್ಲ. ■



ಕರುಣೇಶ



ಬಿ.ಎಂ. ಕೃಷ್ಣಮೂರ್ತಿ



ಅರ್ಜುನ್ ಮಂಜುನಾಥ್



ಮಸ್ತಾನ್